## ಸೈಬರ್ ದಾಳಿ ತಡೆಯ ಸಂಸ್ಥೆಗಳು

- ರಾಷ್ಟ್ರೀಯ ಸೈಬರ್‌ದಾಳಿ ಅಪಾಯಗಳ ಅಧ್ಯಯನ ಕೇಂದ್ರ (ಟಿಎಯು)
- ರಾಷ್ಟ್ರೀಯ ಸೈಬರ್ ಕ್ರೈಂ ವರದಿಗಾರಿಕೆ
- ಸೈಬರ್ ಅಪರಾಧ ಜಂಟಿ ತನಿಖಾ ಸಂಸ್ಥೆ
- ರಾಷ್ಟ್ರೀಯ ಸೈಬರ್ ಅಪರಾಧಗಳ ವಿಧಿವಿಜ್ಞಾನ ಪ್ರಯೋಗಾಲಯ (ಎನ್‌ಸಿಎಫ್‌ಎಲ್)
- ರಾಷ್ಟ್ರೀಯ ಸೈಬರ್ ಅಪರಾಧ ತರಬೇತಿ ಕೇಂದ್ರ (ಎನ್‌ಸಿಟಿಸಿ)
- ಸೈಬರ್ ಅಪರಾಧ ವ್ಯವಸ್ಥೆ ನಿರ್ವಹಣಾ ಘಟಕ
- ರಾಷ್ಟ್ರೀಯ ಸೈಬರ್ ಸಂಶೋಧನೆ ಹಾಗೂ ಅನ್ವೇಷಣಾ ಕೇಂದ್ರ
- ಡಿಜಿಟಲ್ ಇಂಡಿಯಾ ಯೋಜನೆ ಅಡಿಯಲ್ಲಿ ಸೈಬರ್ ಸ್ವಚ್ಛಕೇಂದ್ರ
- ಮಹಿಳೆ ಮತ್ತು ಮಕ್ಕಳ ಮೇಲಿನ ಸೈಬರ್ ದಾಳಿ ಕುರಿತು ತನಿಖೆಗೆ ಆನ್‌ಲೈನ್ ದೂರು ಸಲ್ಲಿಕಾ ಕೇಂದ್ರ



ಸೈಬರ್ ದಾಳಿಗಳ ಮಾಹಿತಿಯಷ್ಟೆ. ದಾಖಲೆಗಳ ಪ್ರಕಾರ, 2019ರವರೆಗೆ ಇಡೀ ಜಗತ್ತಿನಲ್ಲಿ 35 ಕೋಟಿ ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ, ಸೈಬರ್ ದಾಳಿಗೆ ತುತ್ತಾಗಿರುವ ಭಾರತೀಯರ ಸಂಖ್ಯೆ 13.12 ಕೋಟಿ. ತಂತ್ರಜ್ಞಾನದ ಶರವೇಗದ ನಡಿಗೆಯಲ್ಲಿ ಎಲ್ಲರ ಕೈಗಳಿಗೂ ಮೊಬೈಲ್‌ಗಳು ಬಂದಿವೆ. ಇದಕ್ಕೆ ಪ್ರತಿಕ್ರಿಯೆ ಎನ್ನುವಂತೆ ಸೈಬರ್ ದಾಳಿಗಳೂ ಹೆಚ್ಚಾಗಿವೆ. ಇಲ್ಲಿ ದಾಳಿ ನಡೆಸಲು ಮಾರಕಾಸ್ತ್ರಗಳು ಬೇಕಿಲ್ಲ. ಬಾಂಬ್ ಇಡುವ ಅಗತ್ಯವೂ ಇಲ್ಲ. ಮುಖ ಕಾಣಿಸೀತು ಎಂದು ಮುಖಮುಚ್ಚಿಕೊಳ್ಳುವವರೂ ಇಲ್ಲ.

ಆಮಿಷವೆಂಬ ಖೆಡ್ಡಾ ತೋಡಿ, ನಯವಾದ ಮಾತು ಎಂಬ ಅಸ್ತ್ರ ಬಳಸಿ, ಸಲಿಗೆ ಬೆಳೆಸಿಕೊಂಡು ನಂಬಿಕೆ ಸೃಷ್ಟಿಸುವುದೇ ಸೈಬರ್ ದಾಳಿಯ ಸೂತ್ರಗಳಲ್ಲೊಂದು. ಹೀಗಾಗಿಯೇ ಕಳೆದ 12 ತಿಂಗಳಲ್ಲಿ ಭಾರತೀಯರ ₹1.24 ಲಕ್ಷ ಕೋಟಿಯಷ್ಟು ಹಣವನ್ನು ವಂಚಕರು ಲಪಟಾಯಿಸಿದ್ದಾರೆ ಎಂದು ಅಮೆರಿಕದ ತನಿಖಾ ಸಂಸ್ಥೆ ವರದಿಯಲ್ಲಿ ಹೇಳಲಾಗಿದೆ.

ನಾರ್ಟನ್ ಎಂಬ ಆ್ಯಂಟಿ ವೈರಸ್ ತಯಾರಿಕಾ ಸಂಸ್ಥೆಯ ವರದಿ ಅನ್ವಯ ಜಾಗತಿಕ ಮಟ್ಟದಲ್ಲಿ ನಡೆದ ಶೇ. 67ರಷ್ಟು ಸೈಬರ್ ಅಪರಾಧಗಳಲ್ಲಿ ಭಾರತವು ಮೊದಲ ಹತ್ತನೇ ಸ್ಥಾನದಲ್ಲಿ ನಿಂತಿದೆ. ಇದರಲ್ಲಿ ಬಹುಮುಖ್ಯವಾಗಿ ಭಾರತೀಯರ ವೈಯಕ್ತಿಕ ಮಾಹಿತಿಯೇ ಕಳುವಾಗಿದೆ. ಈ ಕುರಿತು ನೂರಕ್ಕೆ 81 ಭಾರತೀಯರು ಕಳವಳ ವ್ಯಕ್ತಪಡಿಸುತ್ತಿದ್ದಾರೆ ಎಂದು ಇದೇ ವರದಿ ಹೇಳಿದೆ. ಪ್ರತಿ ಹತ್ತರಲ್ಲಿ ನಾಲ್ಕು ಜನ ತಮ್ಮ ವೈಯಕ್ತಿಕ ಮಾಹಿತಿ ಕಳುವಾಗಿರುವುದನ್ನು ಹೇಳಿಕೊಂಡಿದ್ದಾರೆ. ಹೀಗೆ ಸೈಬರ್ ದಾಳಿಗೆ ತುತ್ತಾದವರಲ್ಲಿ ಮಹಿಳೆಯರಿಗಿಂತ ಪುರುಷರೇ ಹೆಚ್ಚು. ಅದರಲ್ಲೂ ಹಣದ ವ್ಯವಹಾರದಲ್ಲಿ ಮೋಸಹೋದವರೇ ಹೆಚ್ಚು.

ಇಷ್ಟೇ ಏಕೆ, ಕೋವಿಡ್ ಕಾರ್ಯಾಚರಣೆಗೆ ನೆರವಾಗಲು ಆರಂಭಿಸಲಾದ 'ಪಿಎಂ ಕೇರ್ಸ್' ನಿಧಿಯ ಯುಪಿಐ ವಿಳಾಸವನ್ನೇ ಹೋಲುವ, ಬೇರೊಂದು ವಿಳಾಸ ನೀಡಿ ದೇಣಿಗೆ ಪಡೆದ ಘಟನೆಯೂ ಏಪ್ರಿಲ್‌ನಲ್ಲಿ ವರದಿಯಾಗಿತ್ತು. ಪುಲ್ವಾಮಾ ಸಂತ್ರಸ್ತರ ಹೆಸರಿನಲ್ಲೂ ವಿದೇಶಿ ಖಾತೆಯೊಂದಕ್ಕೆ ದೇಣಿಗೆ ಪಡೆದ ಪ್ರಕರಣಗಳು ಸೈಬರ್ ಠಾಣೆಯಲ್ಲಿ ದಾಖಲಾಗಿವೆ.

### ಮಾಹಿತಿ ಸಂಗ್ರಹವೇ 'ಆಸ್ತಿ'

ವಿಶ್ವದ ಅತ್ಯಂತ ಯಶಸ್ವಿ ಉದ್ಯಮಿಗಳಲ್ಲೊಬ್ಬರಾದ ಚೀನಾದ 'ಅಲಿಬಾಬಾ ಡಾಟ್ ಕಾಮ್' ಕಂಪನಿಯ ಸಂಸ್ಥಾಪಕ ಜಾಕ್‌ಮಾ 'ಆಸ್ತಿ'ಯ ಪರಿಕಲ್ಪನೆ ಬದಲಾಗಿರುವುದನ್ನು ಗುರ್ತಿಸಿರುವುದು ಹೀಗೆ: "ಹಿಂದೊಂದು ಕಾಲವಿತ್ತು. ಮನೆಯಲ್ಲಿ ಹಸು, ಕುರಿ, ಮೇಕೆ ಸೇರಿದಂತೆ ಪ್ರಾಣಿಗಳ ಸಂಖ್ಯೆಗೆ ಅನುಗುಣವಾಗಿ ಶ್ರೀಮಂತಿಕೆಯನ್ನು ಅಳೆಯಲಾಗುತ್ತಿತ್ತು. ನಂತರ ಬಂದಿದ್ದು ಜಮೀನು, ನಂತರ ಹಣ,

# ಸೈಬರ್ ವಂಚನೆಯಿಂದ ರಕ್ಷಣೆ ಹೇಗೆ?

ನೆನಪಿಡಿ, ಯಾರೇ ಆದರೂ ಫೋನ್ ಮಾಡಿ ಒಟಿಪಿ ಕೇಳುತ್ತಾರೆಂದಾದರೆ, ಅದು ಖಂಡಿತವಾಗಿಯೂ ವಂಚನೆಯ ಮೊದಲ ಸುಳಿವು. 'ಯಾರೊಂದಿಗೂ ಒಟಿಪಿ ಹಂಚಿಕೊಳ್ಳಬೇಡಿ' ಎಂದು ಬ್ಯಾಂಕುಗಳು ಹಾಗೂ ರಿಸರ್ವ್ ಬ್ಯಾಂಕ್ ಗ್ರಾಹಕರಿಗೆ ಪದೇ ಪದೇ ಸಂದೇಶ ಕಳುಹಿಸುತ್ತಿವೆ. ಬ್ಯಾಂಕ್ ಅಧಿಕಾರಿ, ಟ್ಯಾಕ್ಸ್ ಅಧಿಕಾರಿ, ಕಸ್ಟಮ್ಸ್ ಅಧಿಕಾರಿ ಅಥವಾ ಪೊಲೀಸ್ ಎಂದೆಲ್ಲ ಹೇಳಿಕೊಂಡು ವಂಚಕರು 'ಒಟಿಪಿ'ಗಾಗಿ ಕರೆ ಮಾಡುತ್ತಲೇ ಇರುತ್ತಾರೆ. ವಿದ್ಯಾವಂತರೇ ಸೈಬರ್ ಅಪರಾಧಿಗಳ ಮೋಸದ ಬಲೆಗೆ ಬಿದ್ದು ಲಕ್ಷಾಂತರ ರೂಪಾಯಿ ಕಳೆದುಕೊಂಡ ಕಥೆಗಳನ್ನು ಓದುತ್ತಲೇ ಇರುತ್ತೇವೆ. ಹೀಗಿರುವಾಗ ತಂತ್ರಜ್ಞಾನದ ಬಗ್ಗೆ ಅಷ್ಟಾಗಿ ಮಾಹಿತಿಯಿಲ್ಲದ ಜನಸಾಮಾನ್ಯನ ಕಥೆಯೇನು?

ಕೈಗೊಂದು ಮೊಬೈಲ್ ಫೋನ್ ಜೊತೆಗೆ, ಇಂಟರ್ನೆಟ್ ಸಂಪರ್ಕವೂ ಕೈಗೆಟಕುವಂತಾದ ಬಳಿಕ ಇಂಥದ್ದೆಲ್ಲ ಸಮಸ್ಯೆಗಳು ಜಾಸ್ತಿಯಾಗಿವೆ. ಎಲ್ಲವೂ ಮೊಬೈಲ್ ಆ್ಯಪ್ ಮೂಲಕ ನಿರ್ವಹಣೆಯಾಗುತ್ತಿರುವ ಈ ಸಂದರ್ಭದಲ್ಲಿ ಸೈಬರ್ ಕ್ರಿಮಿನಲ್‌ಗಳು ಗಾಳ ಹಾಕಿ ಕುಳಿತಿರುತ್ತಾರೆ. ಸರ್ಕಾರದ ಡಿಜಿಟಲ್ ಇಂಡಿಯಾ ಯೋಜನೆಯಿಂದ ಅದೆಷ್ಟೋ ಮಂದಿ ಡಿಜಿಟಲ್ ಸಾಕ್ಷರರಾಗಿದ್ದಾರೆ. ಆದರೆ, ಕೈಯೊಳಗಿರುವ ಮೊಬೈಲ್ ಎಂಬ ಬ್ರಹ್ಮಾಂಡವನ್ನು ಸಮರ್ಪಕವಾಗಿ ನಿಭಾಯಿಸದೇ ಹೋದರೆ ಮತ್ತು ಎಚ್ಚರ ತಪ್ಪಿ ಬಳಸಿದರೆ ಮಾತ್ರ ತೊಂದರೆ ಕಟ್ಟಿಟ್ಟ ಬುತ್ತಿ.

ಕೆಲವು ಸಂದರ್ಭಗಳಲ್ಲಿ ನಮ್ಮ ಸ್ನೇಹಿತರ ಇ–ಮೇಲ್ ವಿಳಾಸಗಳಿಂದಲೇ ನಮಗೆ ಸಂದೇಶಗಳು ಬರುತ್ತವೆ. 'ನಾನು ಪ್ರವಾಸಕ್ಕೆ ಬಂದಿದ್ದು, ಹಣ ಇದ್ದ ಪರ್ಸ್ ಕಳ್ಳತನವಾಗಿದೆ. ತುರ್ತಾಗಿ ನನ್ನ ಈ ಖಾತೆಗೆ ಹಣ ಹಾಕು' ಎಂದು ಸ್ನೇಹಿತರ ಹೆಸರಿನಲ್ಲಿ ಸಂದೇಶ ಬಂದಿರುತ್ತದೆ. ಅದನ್ನು ನಂಬಿ ಹಣ ಹಾಕಿದವರೂ ಇದ್ದಾರೆ. ಇ–ಮೇಲ್ ಖಾತೆಯನ್ನು ಹ್ಯಾಕ್ ಮಾಡಿ ಇಂಥ ಸಂದೇಶಗಳನ್ನು ಕಳುಹಿಸಲಾಗಿರುತ್ತದೆ.

'ನಿಮ್ಮ ಜನ್‌ಧನ್ ಖಾತೆಗೆ ಸರ್ಕಾರದಿಂದ ತುರ್ತಾಗಿ ಹಣ ಹಾಕಬೇಕಿದೆ. ಅದಕ್ಕಾಗಿ ಖಾತೆ ಸಂಖ್ಯೆ ಹೇಳಿ' ಎಂದೂ ಫೋನ್ ಬರಬಹುದು. ನಂತರ, ಒಟಿಪಿ ಕೇಳಬಹುದು. ಇಂಥ ನಕಲಿ ಕರೆಗಳ ಬಗ್ಗೆ ಎಷ್ಟು ಎಚ್ಚರವಾಗಿದ್ದರೂ ಸಾಲದು.

